# MAYA CARE FOUNDATION

## ವರದಿ ಪತ್ರಿಕೆ

Year: 1st Issue: 2nd
ಜನವರಿ - ಮಾರ್ಚ್ 2025


ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

# ಸಂಪಾದಕೀಯ

ಸಾಮರ್ಥ್ಯಗಳನ್ನು ಆಚರಿಸಿ, ಒಳಗೊಂಡ ಭವಿಷ್ಯವನ್ನು ನಿರ್ಮಿಸೋಣ

ಡಿಸೆಂಬರ್ 3, ವಿಶ್ವ ಅಂಗವಿಕಲರ ದಿನ, ಅಂಗವಿಕಲರ ಶಕ್ತಿ ಮತ್ತು ಸಾಧನೆಗಳನ್ನು ಸ್ಮರಿಸುವ ವಿಶೇಷ ದಿನವಾಗಿದೆ. ಇದು ಒಳಗೊಂಡ ಸಮಾಜವನ್ನು ನಿರ್ಮಿಸುವಲ್ಲಿ ನಾವು ತಲುಪಿದ ಅಂತರವನ್ನು ಮತ್ತು ಇನ್ನಷ್ಟು ಏನು ಮಾಡಬಹುದು ಎಂಬುದನ್ನು ನಮಗೆ ತೋರಿಸುತ್ತದೆ. ಅಂಗವಿಕಲತೆ ದೌರ್ಬಲ್ಯವಲ್ಲ, ಇದು ನಮ್ಮ ಜಗತ್ತಿಗೆ ಮೌಲ್ಯವನ್ನು ಹೆಚ್ಚಿಸುವ ವಿಶಿಷ್ಟ ಸಾಮರ್ಥ್ಯವಾಗಿದೆ. ಅಂಗವಿಕಲರನ್ನು ನೋಡುವ ದೃಷ್ಟಿಕೋನವನ್ನು ನಾವು ಬದಲಿಸಬೇಕಾದ ಸಮಯ ಬಂದಿದೆ—ಅದರಲ್ಲಿನ ಅಡ್ಡಿಯನ್ನಲ್ಲ, ಬದಲಾಗಿ ಅವರ ಸಾಮರ್ಥ್ಯವನ್ನು ಗುರುತಿಸೋಣ.

ಈ ಬದಲಾವಣೆ ನಾವು ಪ್ರತಿ ಕ್ಷಣವೂ ನೋಡುತಿರುತ್ತೇವೆ. ಪ್ಯಾರಾಲಿಂಪಿಕ್ಸ್‌ನಲ್ಲಿ, ಕ್ರೀಡಾಪಟುಗಳು ಅತ್ಯದ್ಭುತ ಕೌಶಲ್ಯ ಮತ್ತು ಸಂಕಲ್ಪವನ್ನು ತೋರಿಸುತ್ತಿದ್ದಾರೆ, ದಾಖಲೆಗಳನ್ನು ಮುರಿಯುತ್ತ, ಸವಾಲುಗಳನ್ನು ಜಯಿಸುತ್ತ. ಇವರು ಕೋಟ್ಯಂತರ ಜನರನ್ನು ಪ್ರೇರೇಪಿಸುತ್ತಾರೆ, ಎಲ್ಲವೂ ಸಾಧ್ಯವೆಂದು ನಂಬಿಸುವಂತೆ ಮಾಡುತ್ತಾರೆ.

ಮಾಯಾ ಕೇರ್ ಇಂತಹ ಸಂದೇಶವನ್ನು ಮತ್ತಷ್ಟು ಬಲಪಡಿಸುತ್ತದೆ. ಈ ಸಂಸ್ಥೆಯಲ್ಲಿ ಅಂಗವಿಕಲ ವ್ಯಕ್ತಿಗಳು ತರಬೇತಿ ಪಡೆದು ಪ್ರಮುಖ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ, ಅಂದರೆ ಕಾರ್ಯಾಚರಣೆಗಳು, ಕಾನೂನುಪಾಲನೆ, ದಾನಿಗಳ ಸಂಬಂಧ, ಮತ್ತು ಸಾಮಾಜಿಕ ಉಪಕ್ರಮಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಮಾಯಾ ಕೇರ್ ಅಂಗವಿಕಲರಿಗೆ ಮಹತ್ವದ ಜವಾಬ್ದಾರಿಗಳನ್ನು ನೀಡುವ ಮೂಲಕ ಒಳಗೊಳ್ಳುವಿಕೆಯಿಂದ ಯಶಸ್ಸು ಸಾಧ್ಯವೆಂದು ತೋರಿಸುತ್ತದೆ.

ಮಾಯಾ ಕೇರ್‌ನ ಕಾರ್ಯಕ್ಷೇತ್ರ 72 ಭಾರತೀಯ ನಗರಗಳು ಮತ್ತು 5 ಯುಕೆಯ ನಗರಗಳಲ್ಲಿ ವಿಸ್ತಾರವಾಗಿದೆ. ಇತ್ತೀಚೆಗೆ, ಮಾಯಾ ಕೇರ್ Doing Good for Bharat Award 2024 ಗೆದ್ದಿದೆ, ಇದು ಅಂಗವಿಕಲರನ್ನು ಸಬಲಗೊಳಿಸಲು ಮಾಡಿದ ಅದ್ಭುತ ಕೆಲಸಕ್ಕಾಗಿ. ಜೊತೆಗೆ, Great British Workplace Wellbeing Awards 2025 ರಲ್ಲಿ Best DE&I Initiative of the Year ಗೆ ಆಯ್ಕೆಗೊಂಡಿದೆ, ಇದು ಜಾಗತಿಕ ಮಟ್ಟದಲ್ಲಿ ಒಳಗೊಳ್ಳುವಿಕೆಗೆ ಮಾಡುತ್ತಿರುವ ಬದ್ಧತೆಯನ್ನು ತೋರಿಸುತ್ತದೆ.

ಹೊಸ ವರ್ಷಕ್ಕೆ ಕಾಲಿಡುತ್ತಾ, ನಾವು ಭರವಸೆ ಮತ್ತು ಸಂಕಲ್ಪವನ್ನು ಮುಂದುವರಿಸೋಣ. ಒಟ್ಟಾಗಿ, ಅಂಗವಿಕಲತೆಯನ್ನು ಅಡ್ಡಿಯಂತೆ ನೋಡುವ ಬದಲು ಹೊಸ ಅವಕಾಶಗಳನ್ನು ನೀಡುವ ಸೇತುವೆಯಾಗಿ ಮಾಡೋಣ. ಮಾಯಾ ಕೇರ್ ಸಂತೋಷಕರ ಮತ್ತು ಒಳಗೊಂಡ 2025ರ ಹಾರೈಕೆಗಳನ್ನು ವ್ಯಕ್ತಪಡಿಸುತ್ತಾ, ಹೊಸ ಸಾಧನೆಗಳು, ಹಂಚಿದ ಯಶಸ್ಸು, ಮತ್ತು ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಗಳನ್ನು ಕಾಣುವ ವಿಶ್ವವನ್ನು ಕಟ್ಟೋಣ.

ಹೊಸ ವರ್ಷದ ಶುಭಾಶಯಗಳು!

# ಫಲಾನುಭವಿಗಳಿಂದ ಪ್ರತಿಕ್ರಿಯೆ

1. ಗೀತಾ ನಾರಾಯಣ್ ವಯಸ್ಸು **67**, ಬೆಂಗಳೂರು **( +91 9632524428)**

   ನಾನು ಗೀತಾ ನಾರಾಯಣ್ ಮೂಲತಃ ಬೆಂಗಳೂರಿನವರು. ನನಗೆ ಆರೋಗ್ಯ ಸಮಸ್ಯ ಇರುವುದರಿಂದ ಆಗಾಗ ಆಸ್ಪತ್ರೆಗೆ ಹೋಗಬೇಕಾಗುತಿತ್ತು. ನನಗೆ ಒಬ್ಬರ ಸಹಾಯಕರ ಅವಶ್ಯಕತೆ ಇತ್ತು ಆಗ ಮಾಯಾ ಕೇರ್ ರವರನ್ನು ಸಂಪರ್ಕಿಸಿದೆ, ಅವರು ನನಗೆ ಸೇಲ್ವರಾಜ್ ಎಂಬ ಸ್ವಯಂ ಸೇವಕರನ್ನು ನೇಮಿಸಿದರು. ಅವರು ನನಗೆ ಬ್ಯಾಪ್ಟಿಸ್ಟ್ ಹಾಸ್ಪಿಟಲ್‌ಗೆ ಸುರಕ್ಷಿತವಾಗಿ ಕೊಂಡೊಯ್ಯಲು ತುಂಬಾ ಸಹಾಯ ಮಾಡಿದ್ದಾರೆ. ಅವರು ನನಗೆ ಬಹಳ ಸ್ನೇಹಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ ಸಹಾಯ ಮಾಡಿದರು. ಮಾಯಾ ಕೇರ್ ತಂಡಕ್ಕೆ ನನ್ನ ಧನ್ಯವಾದಗಳು ಹಾಗೂ ನನಗೆ ನೀಡಿದ ಉತ್ತಮ ಸೇವೆಗೆ ಮಾಯಕೇರ್ ಸ್ವಯಂ ಸೇವಕರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇನೆ.

2. **ಬ್ರದರ್ಸ್ ಆಫ್ ಸೆಂಟ್ ಜೋಸೆಫ್ ಕೋಟೋಲೆಂಗೊ ವೃದ್ಧಾಶ್ರಮ, ಏರ್ನಕುಲಂ (ಕೇರಳ) ( +91 8281791383)**

   ಬ್ರದರ್ಸ್ ಆಫ್ ಸೆಂಟ್ ಜೋಸೆಫ್ ಕೋಟೋಲೆಂಗೊ ವೃದ್ಧಾಶ್ರಮದಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಮಾಯಾಕೇರ್ ಸ್ವಯಂಸೇವಕರಾದ ಶ್ರುತಿ ಲಕ್ಷ್ಮಿ, ಸ್ನೇಹ, ಮರಿಯಾ ಅಂಜಿತಾ, ಶಹಫಿಲ ಮತ್ತು ಜಿಸ ಜೋಜಿ ಅವರು ನಮ್ಮ ವೃದ್ಧಾಶ್ರಮಕ್ಕೆ ಬಂದು ಹರ್ಷಭರಿತ ಕಾರ್ಯಕ್ರಮವನ್ನು ಆಯೋಜಿಸಿದರು. ಸಂಗೀತ ಮತ್ತು ಆಟಗಳಿಂದ ಹಿರಿಯರ ಮುಖದಲ್ಲಿ ನಗುವು ಮೂಡಿತು ಮತ್ತು ಹಬ್ಬದ ಸಂಭ್ರಮ ಹೆಚ್ಚಾಯಿತು.. ಇದಕ್ಕೆ ಮಾಯಾ ಕೇರ್ ಸಂಸ್ಥೆಗೆ ನನ್ನ ಹೃತ್ಪೂರ್ವಕ ವಂದನೆಗಳು..

3. ಅನ್ಬು ಮಲರ್ ವೃದ್ಧಾಶ್ರಮ , ಕೊಯಿಮತ್ತೂರು **(+91 9566671072)**

   ಕ್ರಿಸ್ಮಸ್ ಹಬ್ಬವನ್ನು ಹರ್ಷಭರಿತವಾಗಿ ಆಚರಿಸಲು ಸಹಕಾರ ನೀಡಿದ ಮಾಯಾಕೇರ್ ತಂಡದ ಸ್ವಯಂ ಸೇವಕರದ ಶರ್ಮಿಳಾ, ಕಾವ್ಯ, ಕಲ್ಯೆವಾನಿ, ಗಾಯತ್ರಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ನಿಮ್ಮ ಸ್ವಯಂಸೇವಕರ ಪ್ರೀತಿ ಮತ್ತು ಶ್ರಮ ನಮ್ಮ ಹಿರಿಯರಿಗೆ ಅಪಾರ ಸಂತಸವನ್ನು ನೀಡಿತು. ಮುಂದೆಯೂ ಇಂತಹ ಕಾರ್ಯಕ್ರಮಗಳಲ್ಲಿ ನಿಮ್ಮ ಸಹಕಾರ ಎಂದಿಗೂ ಆಶಿಸುತ್ತೇವೆ

4. **ಪ್ರಾವಿಡೆನ್ಸ್ ಹೋಮ್ ವೃದ್ಧಾಶ್ರಮ ಬೆಂಗಳೂರು (+91 8747977228)**

   ನಮ್ಮ ವೃದ್ಧಾಶ್ರಮದಲ್ಲಿ ಮಾಯಾ ಕೇರ್ ವತಿಯಿಂದ ಖಾಸಗಿ ಕಂಪನಿಗಳಾದ J. P Morgan & CGI ಕಂಪನಿಗಳು ತಮ್ಮ ಸ್ವಯಂ ಸೇವಕರ ಜೊತೆ ಬಂದು ನಮ್ಮಲ್ಲಿರುವ ವೃದ್ಧರ ಜೊತೆ ಸಂಗೀತ, ಆಟ, ನೃತ್ಯ ಮಾಡುವುದರ ಮೂಲಕ ಅವರಿಗೆ ಸಂತೋಷ ವನ್ನು ನೀಡಿದರು. ಇದಕ್ಕೆಲ್ಲ ಕಾರಣ ಮಾಯಾ ಕೇರ್ ಫೌಂಡೇಶನ್, ಅವರಿಗೆ ನಮ್ಮ ಕಡೆಯಿಂದ ಹೃತ್ಪೂರ್ವಕ ಧನ್ಯವಾದಗಳು. ನಿಮ್ಮ ನಿರಂತರ ಈ ಸೇವೆ ಹೀಗೆ ಮುಂದುವರೆಯಲಿ

# ಮಾಯಕೇರ್ ಚಟುವಟಿಕೆಗಳು

1. ಬೆಂಗಳೂರಿನ ಪ್ರತಿಷ್ಠಿತ ಶೆಲ್ ಕಂಪನಿ ಅವರು ಮ್ಯಾರಥಾನ್ ಆಯೋಜಿಸಿದ್ದರು, ಇದಕ್ಕೆ ಮಾಯಾ ಕೇರ್ ಸಂಸ್ಥೆಗೆ ಆಹ್ವಾನ ನೀಡಿದ್ದರು, ಅಲ್ಲಿ ನಮ್ಮ ಸ್ವಯಂ ಸೇವಕರದ ಸಂದೀಪ್, ಸೇಲ್ವರಾಜ್, ಮತ್ತು ಪಲ್ಲವಿ ಅವರು ಪಾಲ್ಗೊಂಡು ಸಂಸ್ಥೆಯ ಬಗ್ಗೆ ಅರಿವು ಮೂಡಿಸಿದರು.
2. ಬೆಂಗಳೂರಿನ ಪ್ರಾವಿಡೆನ್ಸ್ ವೃದ್ಧಾಶ್ರಮದಲ್ಲಿ ಪ್ರತಿಷ್ಟಿತ ಕಂಪನಿ CGI ಕಂಪನಿ ಕಾರ್ಯಕ್ರಮ ಆಯೋಜಿಸಿತ್ತು ಅಲ್ಲಿ ಕಂಪನಿ ಸ್ವಯಂ ಸೇವಕರು ಮತ್ತು ಮಾಯಾ ಕೇರ್ ಜೊತೆಗೂಡಿ ಅಲ್ಲಿರುವ ವೃದ್ಧರಿಗೆ ಸಂಗೀತ, ನೃತ್ಯ, ಮೆಹಂದಿ, ಆಟ ಮುಂತಾದವುಗಳ ಮೂಲಕ ಮನೋರಂಜನೆಯನ್ನು ನೀಡಿದರು.
3. ಕೊಯಿಮತ್ತೂರ್ ಮತ್ತು ಕೇರಳ ವೃದ್ಧಾಶ್ರಮದಲ್ಲಿ ಕ್ರಿಸ್ಮಸ್ಸ್ ನ್ನು ವೃದ್ಧರ ಜೊತೆ ಮಾಯಾ ಕೇರ್ ಸ್ವಯಂ ಸೇವಕರು ಕೇಕ್ ಹಂಚುವುದರ ಮೂಲಕ ಜೊತೆಗೆ ಹಬ್ಬವನ್ನು ಸಂತೋಷದಿಂದ ಆಚರಿಸಿದರು.
4. ಪ್ರತಿಷ್ಠಿತ oracale ಕಂಪನಿಯವರು ಸಾಯಿ ಪ್ರಶಾಂತಿ ವೃದ್ಧಶ್ರಮದ್ದಲ್ಲಿರುವ ವೃದ್ಧರಿಗೆ ಚಳಿಗಾಲಕ್ಕೆ ಅವಶ್ಯಕವಿರುವ ಸಾಮಗ್ರಿಗಳನ್ನು ತಲುಪಿಸಿದರು, ಅವುಗಳನ್ನು ಮಾಯಾ ಕೇರ್ ಸ್ವಯಂ ಸೇವಕಿಯದ ನೇಹಾ ವಿತರಿಸಿದರು.

# _ಹಿರಿಯರಿಗೆ ಆರೋಗ್ಯಕರ ಮಾಹಿತಿ

1. ನಿಯಮಿತ ಸರಳ ವ್ಯಾಯಾಮದ ಮೂಲಕ ದೇಹವನ್ನು ಸದೃಢಗೊಳಿಸುವುದು
2. ಸೂರ್ಯನ ಬೆಳಕಿಗೆ ಶರೀರವನ್ನು ಒಡ್ಡಿಕೊಳ್ಳುವುದು, ಮತ್ತು ಬಲವರ್ಧಿತ ಆಹಾರಗಳ ಮೂಲಕ ಸಾಕಷ್ಟು ವಿಟಮಿನ್ ಡಿ ಮಟ್ಟವನ್ನು ಕಾಪಾಡಿಕೊಳ್ಳುವುದು.
3. ಮೊಳಕೆಭರಿತ ಧಾನ್ಯಗಳು, ಹಣ್ಣುಗಳು , ಹಸಿರು ಸೊಪ್ಪುಗಳು ಮತ್ತು ತರಕಾರಿಗಳಂತಹ ಫೈಬರ್ ಭರಿತ ಆಹಾರಗಳೊಂದಿಗೆ ಜೀರ್ಣಕಾರಿ ಆರೋಗ್ಯವನ್ನು ಕಾಪಾಡಿಕೊಳ್ಳುವುದು.
4. ನೀರು, ಗಿಡಮೂಲಿಕೆ ಚಹಾ ಮತ್ತು ಕಡಿಮೆ ಸಕ್ಕರೆ ರಸಗಳ ಮೂಲಕ ಸಾಕಷ್ಟು ದ್ರವ ಸೇವನೆಯನ್ನು ಮಾಡುವುದು
5. ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಿ
6. ಬೆಣ್ಣೆ ಮತ್ತು ಸಕ್ಕರೆ ಪಾನೀಯಗಳು, ಸಿಹಿತಿಂಡಿಗಳು ಮತ್ತು ಸ್ಯಾಚುರೇಟೆಡ್ ಕೊಬ್ಬುಗಳನ್ನು ನಿರ್ಬಂಧಿಸಿ



ಕೊಯಮತ್ತೂರಿನ ಮಣಿಕಂದನ್ ಎಂಬ ವೃದ್ಧರಿಗೆ ಮಾಯಕೇರ್ ಸ್ವಯಂ ಸೇವಕಿ ಸುಭಾಷಿನಿ ಆಸ್ಪತ್ರೆ ಗೆ ಕರೆದುಕೊಂಡು ಹೋಗಿರುವುದು



ಕೊಯಮತ್ತೂರಿನ ಹೆಲ್ಪಿಂಗ್ ಹಾರ್ಟ್ಸ್ ವೃದ್ಧಾಶ್ರಮದಲ್ಲಿ ಕ್ರಿಸ್ಮಸನ್ನು ಸಂಭ್ರಮದಿಂದ ಆಚರಿಸಿದರು.



J. P Morgan ಖಾಸಗಿ ಕಂಪನಿ & ಮಾಯಾ ಕೇರ್ ಸ್ವಯಂ ಸೇವಕರು ಪ್ರಾವಿಡೆನ್ಸ್ ವೃದ್ಧಶ್ರಮದಲ್ಲಿ ಚಟುವಟಿಕೆ ನಡೆಸಿದರು.



ಚೆನ್ನೈನ ವೃದ್ಧರೊಬ್ಬರಿಗೆ ಮಾಯಕೇರ್ ಸ್ವಯಂ ಸೇವಕ ಎಕಿಹ್ ಚಾರ್ಲೆಸ್ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡುತ್ತಿರುವುದು

Year: 1st Issue: 2nd
ಜನವರಿ - ಮಾರ್ಚ್ 2025

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| | |
|---|---|
| ಮಾಯಾ ಕೇರ್ ಭಾರತದ 72 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | **FOR WHATSAPP** |
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | **9552510400/9552510411**<br>**8055995966** |

ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ

1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| | |
|---|---|
| **Website - www.mayacare.org** | **Email : service@mayacare.org** |

Merchant Name : **MAYA CARE FOUNDATION**
Mobile Number : **7721053535**

**Deduction under I-Tax Act is Available**

NAME OF THE A/C - MAYA CARE FOUNDATION

NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**UPI ID: mayacarefoundation@icici**

**Book-Post**

| **FROM:** | **TO:** |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>__________<br>__________<br>__________ |